**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಗಳ ನ್ಯಾಯಾಲಯ, ಹೊಸಪೇಟೆ.**

**ಸಿಸಿ ನಂಬರ್** 2109/2017

**ಸಿ ಡಬ್ಲೂ -11**
**ಪಿ ಡಬ್ಲೂ - 9**

| | |
|---|---|
| **ಸಾಕ್ಷಿಯ ಹೆಸರು -** | **ಹೇಮಗಿರಿಯಪ್ಪ** |
| **ತಂದೆಯ ಹೆಸರು -** | **ಬಿ. ದುರ್ಗಪ್ಪ** |
| **ವಯಸ್ಸು -** | **47 ವರ್ಷಗಳು** |
| **ಉದ್ಯೋಗ -** | **ವ್ಯವಸಾಯ ಕೆಲಸ** |
| **ವಾಸಸ್ಥಳ -** | **ಹಳೆ ಮಲಪನಗುಡಿ** |

**ಸಾಕ್ಷಿಯನ್ನು ದಿನಾಂಕಃ** 18-09-2025 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ಈಗ್ಗೆ **5-6** ವರ್ಷಗಳ ಹಿಂದೆ ಹೊಸಪೇಟೆಯಿಂದ ರವಿ ಕುಮಾರ ಎಂಬ ವ್ಯಕ್ತಿ ಬಂದು ಬಜಾಜ್ ಕಂಪನಿಯಲ್ಲಿ ಸಾಲ ಕೊಡಿಸುತ್ತೇನೆ ಎಂದು ಹೇಳಿದ್ದ. ಆತ ನಮ್ಮ ಆಧಾರ ಕಾರ್ಡ ಮತ್ತು ಬ್ಯಾಂಕ್ ಪಾಸ್ ಬುಕ್ ನಕಲುಗಳನ್ನು ತೆಗೆದುಕೊಂಡು ಹೋಗಿದ್ದ. ನಂತರ ನನಗೆ ಯಾವುದೇ ಸಾಲ ಕೊಟ್ಟಿರುವುದಿಲ್ಲ. ಆ ವ್ಯಕ್ತಿ ಆಗಿನಿಂದ ಪತ್ತೆಯಾಗಿರುವುದಿಲ್ಲ.

ನಂತರ ಬಜಾಜ್ ಪೈನಾನ್ಸ್ ರವರು ನಮ್ಮ ಮನೆಯ ಹತ್ತಿರ ಬಂದು ನಾನು ಅವರಿಂದ ಸಾಲ ಪಡೆದಿರುತ್ತೇನೆ ಎಂದು ತಿಳಿಸಿದಾಗ ನಾನು ಸಾಲ ತೆಗೆದುಕೊಂಡಿಲ್ಲ ಎಂದು ತಿಳಿಸಿರುತ್ತೇನೆ. ಸದರಿ ಬಜಾಜ್ ಪೈನಾನ್ಸ್ ರವರು ಗಲಾಟೆ ಮಾಡಿದಾಗ ನಾವು ಪ್ರಕರಣ ದಾಖಲಿಸಿರುತ್ತೇವೆ. ಬಜಾಜ್ ಪೈನಾನ್ಸ್ ರವರಿಗೆ ನಮ್ಮ ಸಹಿ ಇಲ್ಲದೇ ಹೇಗೆ ಸಾಲ ಕೊಟ್ಟಿರಿ ಎಂದು ಕೇಳಿದಾಗ ರವಿಕುಮಾರ ಎಂಬ ವ್ಯಕ್ತಿ ಎಲ್ಲಾ ವ್ಯವಸ್ಥೆ ಮಾಡಿರುತ್ತಾನೆ ಆತನ ಮೂಲಕವೇ ಸಾಲ ಮಂಜೂರು ಆಗಿರುತ್ತದೆ ಎಂದು ತಿಳಿಸಿರುತ್ತಾರೆ.

ನನ್ನೊಂದಿಗೆ ಚಾಸಾ **-6** ರಿಂದ **10** ಮತ್ತು **12** ಒಟ್ಟು **8-10** ಜನ ದಾಖಲೆಗಳನ್ನು ನೀಡಿದ್ದರು. ಎಲ್ಲರಿಗೂ ಸದರಿ ಆರೋಪಿ ಇದೇ ರೀತಿ ಮಾಡಿರುತ್ತಾನೆ.

**ಪಾಟೀ ಸವಾಲು ಆರೋಪಿ ಪರ ಶ್ರೀ ಹೆಚ್. ಆರ್., ವಕೀಲರಿಂದಃ** ಇಲ್ಲಾ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.